ಪದ್ಯಪಲ್ಲವ



ಎಸ್.ಆರ್. ವಿಜಯಶಂಕರ

# ಜೀವಪರ ಧರ್ಮ-ದೇವರ ಕಾಣಿಸುವ ಕವಿತೆ

ಹಿಂದಿನ ಹಾಗೂ ಇಂದಿನ ದೇವರುಗಳನ್ನು ಹೋಲಿಸುತ್ತಾ ದೇವರು ಧರ್ಮಗಳ ಮೂಲಸ್ವರೂಪ ಯಾವುದು ಎಂಬುದನ್ನು 'ಇಂದಿನ ದೇವರು' ಕವನ ಚರ್ಚಿಸುತ್ತದೆ. ಕೊನೆಗೂ ಅವರು 'ಅಂತರ್ಗತಿಗೆ ಮತಿಯಾಗಿ'ರಬೇಕಾದವರು ಎಂಬುದು ಕವನದ ಭಾವಾನುಭವ. ಹಾಗಿದ್ದಾಗಲೇ ಅವರು ವೇದ, ಬೋಧ, ನಾದಮೂರ್ತಿಗಳಾಗಬಲ್ಲರು. ಅಂತರಂಗದ ಈ ಶುದ್ಧ ಪಾವಿತ್ರ್ಯವನ್ನು ಕಳಕೊಂಡು, ಯಾಕೆ ಈಗ ದೇವರು (ಧರ್ಮ) ಬಹಿರಂಗದ ಬೊಬ್ಬೆ-ಪ್ರದರ್ಶನಗಳಲ್ಲಿ ನಿರತವಾಗಬೇಕಾಯಿತು ಎಂಬುದರ ಪರಿಭಾವನೆ ಈ ಕವನದ ಆಶಯ.



ಶುದ್ಧಶೀಲರಾದ ಹಿಂದಿನ ದೇವರುಗಳ ಗುಣ ಈಗ ಯಾಕಿಲ್ಲ ಎಂಬ ಪ್ರಶ್ನೆಯ ಮೂಲಕ ಶ್ರದ್ಧೆಯು ಅಂಧಶ್ರದ್ಧೆಯಾಗಬಾರದೆಂದು ಕವನ ಆಸ್ತಿಕ ನಂಬಿಕೆಯನ್ನು ವೈಚಾರಿಕತೆಯ ಮೂಲಕ ಅನುಭವದ ನೆಲೆಗೆ ಒಯ್ಯುತ್ತದೆ. ಒಲವಿನಲಿ ನಲವಾಗಿ 'ಅನುಭವದಿ ಚೆಲುವಾಗಿ' ನಮ್ಮ ದೇವರು 'ನಮ್ಮೊಡನೆ ನಾನಾಗಿ' ಬರಬೇಕೆಂಬುದು ಆಶಯ. ಭಕ್ತಿ ಇರುವಲ್ಲಿ ಭಯಕ್ಕೆ ಸ್ಥಾನವೆಲ್ಲಿ? ಅಂತರಂಗದಲ್ಲಿ ನಮ್ಮಲ್ಲಿರಬೇಕಾದ ನಮ್ಮ ದೇವರು ಯಾಕೆ 'ಪ್ರೇತದೇವನ ವಿಜಯ ಯಾತ್ರೆಗೆ/ ಏಕಸೂತ್ರತೆಯೋರಣ'ವಾಗಿ ಪರಿವರ್ತಿತನಾಗಿದ್ದಾನೆ ಎಂಬುದನ್ನು ಕವನ ಪರೀಕ್ಷಿಸುತ್ತದೆ. ದೇವರ ನೆಪದ ಈ ಚಿಂತನೆ ಅಂತಿಮವಾಗಿ ಆಧುನಿಕ ಜಗತ್ತಿನಲ್ಲಿ ಬದಲಾಗುತ್ತಿರುವ ಮನುಷ್ಯನ ಮನೋಧರ್ಮಗಳನ್ನೂ ಪರಿಭಾವಿಸುತ್ತದೆ. ಮನುಷ್ಯ ದೇವರ ಸಂಬಂಧವನ್ನು ಸಾಮಾಜಿಕ ನೆಲೆಯಲ್ಲೂ ಗಮನಿಸುತ್ತಾ (ಸೋಹಮೆನೆ ದಾಸೋಹಮೆಂದರು), ಮಾನವ ಕುಲದ ಆದಿನಂಬಿಕೆಗಳ - ಪದ್ಧತಿಗಳ ಮಾನವ ವಿಜ್ಞಾನದ (Anthropology) ಹಿನ್ನೆಲೆಯಲ್ಲಿ ಮನುಷ್ಯನ ಇಂದಿನ ಮನೋಸ್ಥಿತಿಯನ್ನು ಸೂಕ್ಷ್ಮವಾಗಿ ಸೂಚಿಸುವ ಈ ಕವನದ ವ್ಯಾಖ್ಯಾನವೂ ಸಾಧ್ಯವಿದೆ.

ಕವಿಯ ಆಶಯವೆಂದರೆ, ದೇವರು ಒಡಲ ದೇಗುಲ ಹುಡುಕಿ ಹೃದಯ ಪೀಠವನ್ನೇರುವ ಹಾಗಾಗಬೇಕು. 'ದೇವ - ಮನುಜರು', 'ಮನುಜ - ದೇವರು' ಸ್ಥಾನಪಲ್ಲಟವಾಗುವುದು ಮನುಷ್ಯರು ದೇವರ ನೆಲೆಗೇರುವ ಆತ್ಮವಿಶ್ವಾಸದಿಂದ. ಆಗ ಅವರು